ನಿವೃತ್ತಿಯ ಅಂಚಿನಲ್ಲಿದ್ದಾರೆ, ದೈನಂದಿನ ಆಗುಹೋಗುಗಳ ನಿರ್ವಹಣೆ ಬಿಟ್ಟು ಅವರಿಂದ ದೊಡ್ಡ ಕೊಡುಗೆಯೇನನ್ನೂ ನಿರೀಕ್ಷಿಸಲಾಗದು ಎನ್ನುವಾಗ ಕಂಪೆನಿ ಅಪೇಕ್ಷಿಸುವ ಪರ್ಫಾರ್ಮೆನ್ಸ್ ನೇರ ನನ್ನ ಪರ್ಫಾರ್ಮೆನ್ಸ್ ಆಗುತ್ತದೆ. ಅದನ್ನು ನಾನು ಕೊಡಬಲ್ಲೆನೇ ಎನ್ನುವ ಸಂಕೋಚ ಇದೆ. ಗೌರವ್ ಜೊತೆಗಿದ್ದರೆ ಕಂಪೆನಿ ನಮಗೆ ಕೊಡುವ ಟಾರ್ಗೆಟ್ಟುಗಳನ್ನು ಮೀರಿ ನಿಲ್ಲಬಲ್ಲೆವು ಎಂಬ ಪೂರ್ಣ ಭರವಸೆ ಇದೆ. ಇದು ನನ್ನ ಅಭಿಪ್ರಾಯ. ಇನ್ನು ನಿಮ್ಮ ನಿರ್ಧಾರ ಏನೇ ಇರಲಿ, ಅದಕ್ಕೆ ನಾನೂ ಬದ್ಧನಾಗಿ ಕಂಪೆನಿ ವ್ಯವಹಾರಗಳಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುತ್ತೇನೆ' ಶಬ್ದಗಳನ್ನು ಜಾಗರೂಕತೆಯಿಂದ ಬಳಸಿ ಉತ್ತರವಿತ್ತ ಮೆನನ್.

'ಒಟ್ಟಾರೆ ಸಂಕ್ಷೇಪದಲ್ಲಿ ನೀನೇನು ಹೇಳುವುದು?' ಚೇರ್ಮನ್ನರು ಮೆನನ್ ಹೇಳಿದ ಉತ್ತರಕ್ಕೆ ಸ್ವಲ್ಪ ಗಲಿಬಿಲಿಯಾಗಿದ್ದಂತೆ ಕಂಡುಬಂದರು.

'ನಾನು ಹೇಳುವುದಿಷ್ಟೇ... ಗೌರವನನ್ನು ಉಳಿಸಿಕೊಳ್ಳಿ, ಅವನ ವೇತನ ಪರಿಷ್ಕರಣೆಯ ಖರ್ಚುವೆಚ್ಚ ಕಂಪೆನಿಗೆ ಹೊರೆಯಾಗದಂತೆ ನಾನು ನೋಡಿಕೊಳ್ಳುತ್ತೇನೆ' ದೃಢವಾಗಿ ನುಡಿದ ಮೆನನ್.

'ಗುಡ್... ನಿನ್ನಿಂದ ಇಂತಹ ಹೊಣೆಗಾರಿಕೆಯ ಮಾತುಗಳನ್ನೇ ನಿರೀಕ್ಷಿಸುತ್ತಿದ್ದೆ. ಗೌರವನನ್ನು ಉಳಿಸಿಕೊಳ್ಳಬೇಕೇ ಬೇಡವೇ ಎಂದು ನಿರ್ಧರಿಸುವಾಗ ನಿನ್ನ ಈ ಮಾತುಗಳನ್ನೂ ಬೋರ್ಡು ಸದಸ್ಯರ ಮುಂದಿಡುತ್ತೇನೆ' ಎಂದು ಬೀಳ್ಕೊಟ್ಟರು.

ಅವಿರತ ದುಡಿಮೆಯಿಂದ ಅವಕಾಶಗಳಿರುವುದನ್ನು ಪತ್ತೆ ಹಚ್ಚಿ ಗೌರವ್ ಕಂಪೆನಿಯ ಉನ್ನತಿಗೆ ಸದಾ ಸಹಾಯ ಮಾಡುತ್ತಿದ್ದ. ಆದರೆ ಚಾಣಾಕ್ಷ ಮೆನನ್ ತನ್ನ ಹತ್ತಿರಕ್ಕೂ ಸುಳಿಯದ ಅವಕಾಶಗಳನ್ನು ದೊರಕಿಸಿಕೊಂಡು ದಕ್ಕಿಸಿಕೊಳ್ಳುವುದರಲ್ಲಿ ನಿಸ್ಸೀಮ. ಇಂತಹ ಚಾಣಾಕ್ಷ ಚಿಂತನೆಯ ಫಲವಾಗಿಯೇ ಸಂಬಂಧವಿರದ ಗೌರವನ ಪ್ರಕರಣದಲ್ಲಿ ಒಳಗೆ ನುಸುಳಿ ಗೌರವನ ಬಾಯಿಯಿಂದ 'ಇಷ್ಟು ಸಿಕ್ಕರೆ ಇಲ್ಲಿಯೇ ಮುಂದುವರೆಯುತ್ತೇನೆ' ಎಂಬ ಮಾತು ಹೊರಡಿಸಿದ್ದ. ಗೌರವನ ರಾಜೀನಾಮೆ, ಶರ್ಮಾರ ರಿಟೈರ್‌ಮೆಂಟು ಗೊಂದಲಗಳ ನಡುವೆ ಸಿಕ್ಕಿಕೊಂಡ ಮ್ಯಾನೇಜ್‌ಮೆಂಟ್ ಮುಂದೆ ಯಾವುದೇ ನಿರ್ಧಾರ ತೆಗೆದುಕೊಂಡರೂ ಅದು ಮೆನನ್ ಪಾಲಿಗೆ ವರದಾನವಾಗುವುದರಲ್ಲಿ ಸಂದೇಹವೇ ಇರಲಿಲ್ಲ!

**ಗೋಪೀನಾಥ್ ರಾವ್**

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿ. ತಂದೆ ಹೆಸರಾಂತ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ಅಮ್ಮ ಮುತ್ತಮ್ಮ. ವಿದ್ಯಾಭ್ಯಾಸ ಕಟಪಾಡಿ, ಸುರತ್ಕಲ್ ಮತ್ತು ಮಂಗಳೂರಲ್ಲಿ. ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್. ಪ್ರಸ್ತುತ ದುಬೈಯಲ್ಲಿ ಉದ್ಯೋಗ. ಅವರ ಕಥಾಸಂಕಲನಗಳು: 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?'